ಪ್ರಧಾನ ಕಚೇರಿ
ಉದ್ಯೋಗಿಗಳ ರಾಜ್ಯ ವಿಮಾ ನಿಗಮ
Employees' State Insurance Corporation
ಪಂಚದೀಪ ಭವನ, ಸಿ.ಐ.ಜಿ.ಮಾರ್ಗ, ನವದೆಹಲಿ-110002
(ಐಎಸ್‌ಒ 9001-2008 ಪ್ರಮಾಣಿತ), ವೆಬ್‌ಸೈಟ್ : www.esic.nic.in, www.esic.in, www.esichospitals.gov.in

# ಪ್ರವೇಶಾವಕಾಶ ಸೂಚನೆ

## ಇಎಸ್‌ಐಸಿ ಮೆಡಿಕಲ್ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಅವಧಿಗೆ ಯುಜಿ ಕೋರ್ಸ್ (ಎಂಬಿಬಿಎಸ್)ಗೆ ಪ್ರವೇಶಕ್ಕಾಗಿ ವಿಮೆ ಪಡೆದ ವ್ಯಕ್ತಿಗಳ (ಐಪಿಗಳ) ಪೋಷಿತರಿಂದ ಅರ್ಜಿ ಆಹ್ವಾನ.

ಇಎಸ್‌ಐಸಿ ಮೆಡಿಕಲ್ ಕಾಲೇಜುಗಳಲ್ಲಿ 'ವಿಮೆ ಪಡೆದ ವ್ಯಕ್ತಿಗಳ ಕೋಟಾ' (ಈ ಮೊದಲು ಇಎಸ್‌ಐಸಿ ಮ್ಯಾನೇಜ್‌ಮೆಂಟ್ ಕೋಟಾ) ಅಡಿಯಲ್ಲಿ ಶೈಕ್ಷಣಿಕ ಅವಧಿ 2016-17ಕ್ಕಾಗಿ ಯುಜಿಕೋರ್ಸ್ (ಎಂಬಿಬಿಎಸ್)ಗೆ ಕೇಂದ್ರ ಸರ್ಕಾರದ ಅನುಮೋದಿತ ಪ್ರವೇಶ ನೀತಿ ಮತ್ತು ವಿಧಾನಗಳ ಪ್ರಕಾರ ಪ್ರವೇಶ ಪಡೆಯಲು ವಿಮೆ ಪಡೆದ ವ್ಯಕ್ತಿಗಳ (ಐಪಿಗಳು) ಪೋಷಿತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ರಾಷ್ಟ್ರೀಯ ಅರ್ಹತೆ ಕಂ ಪ್ರವೇಶ ಪರೀಕ್ಷೆ (ಯುಜಿ)-2016 ಎನ್‌ಇಇಟಿ (ಯುಜಿ) I/II-2016)ಗಳಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. (ವಿವರಗಳಿಗೆ ಅಭ್ಯರ್ಥಿಯು www.aipmt.nic.inನಲ್ಲಿ ಲಭ್ಯವಿರುವ ಎನ್‌ಇಇಟಿ-2016ರ ಮಾಹಿತಿ ಬುಲೆಟಿನ್ ನೋಡಬಹುದು). ಪ್ರವೇಶದ ಇನ್ನಿತರ ಅರ್ಹತಾ ನಿಬಂಧನೆಗಳನ್ನು ವಿಸ್ತೃತ ಪ್ರವೇಶಾತಿ ಸೂಚನೆಯಲ್ಲಿ ಕಾಣಬಹುದು. ಸಮಾಲೋಚನೆಗಾಗಿ ಕರೆಯಲ್ಪಟ್ಟ ಅರ್ಹ ವಿದ್ಯಾರ್ಥಿಗಳ ತತ್ಪೂರ್ತಿಕ ಪಟ್ಟಿಯನ್ನು ಇಎಸ್‌ಐಸಿ ವೆಬ್‌ಸೈಟ್ www.esic.nic.in.ನಲ್ಲಿ ಪ್ರದರ್ಶಿಸಲಾಗುವುದು. ಇಎಸ್‌ಐಸಿ ಮ್ಯಾನೇಜ್‌ಮೆಂಟ್ ಕೋಟಾದ ಸೀಟುಗಳಿಗೆ, ಹರಿಯಾಣ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿರುವ ತನ್ನ ಮೆಡಿಕಲ್ ಕಾಲೇಜುಗಳಿಗಾಗಿ ಇಎಸ್‌ಐಸಿ, ಯುಜಿಕೋರ್ಸ್ (ಎಂಬಿಬಿಎಸ್)ಗೆ ಪ್ರವೇಶಕ್ಕಾಗಿ ಕೇಂದ್ರೀಕೃತ ಸಮಾಲೋಚನೆಯನ್ನು ದೆಹಲಿಯಲ್ಲಿ ನಡೆಸಲಿದೆ.

ಘಟನಾವಳಿಗಳ ತಾತ್ಪೂರ್ತಿಕ ವೇಳಾಪಟ್ಟಿ ಕೆಳಕಂಡಂತಿದೆ.

| | | |
|---|---|---|
| 1. | ಇಎಸ್‌ಐಸಿ ಪ್ರಧಾನ ಕಚೇರಿಯಲ್ಲಿ ಅರ್ಜಿ ಸ್ವೀಕಾರದ ಕಡೇ ದಿನಾಂಕ | 1ನೇ ಸೆಪ್ಟಂಬರ್, 2016ರಂದು ಸಂಜೆ 5.00ಗಂಟೆ (ಗುರುವಾರ) |
| 2. | ಸಮಾಲೋಚನೆಗಾಗಿ ತಾತ್ಪರ್ತಿಕವಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರದರ್ಶನ | 7ನೇ ಸೆಪ್ಟಂಬರ್, 2016 (ಬುಧವಾರ) |
| 3. | 1ನೇ ಸಮಾಲೋಚನೆ ಮತ್ತು ಕಾಲೇಜು ಹಂಚಿಕೆ ಹಾಗೂ ಶುಲ್ಕ ಪಾವತಿ | 14ನೇ ಮತ್ತು 15ನೇ ಸೆಪ್ಟಂಬರ್, 2016 (ಬುಧವಾರ ಮತ್ತು ಗುರುವಾರ) |
| 4. | 2ನೇ ಸಮಾಲೋಚನೆ (ಅಗತ್ಯವಿದ್ದಲ್ಲಿ) | 22ನೇ ಸೆಪ್ಟಂಬರ್, 2016 (ಗುರುವಾರ) |

ವಿಸ್ತೃತ ಪ್ರವೇಶಾತಿ ಸೂಚನೆ ಇಎಸ್‌ಐಸಿ ವೆಬ್‌ಸೈಟ್ : www.esic.nic.inನಲ್ಲಿ ಲಭ್ಯ

**ಹೆಚ್ಚುವರಿಮಾಹಿತಿ :**

ಎ. ಹಂಚಿಕೆ ಮಾಡಲಿರುವ ಸೀಟುಗಳ ಸಂಖ್ಯೆ ತಾತ್ಪೂರ್ತಿಕವಾಗಿರುವುದು.

ಬಿ. ಹೆಚ್ಚಿನ ಮಾಹಿತಿ/ಸೂಚನೆಗಾಗಿ ಅಭ್ಯರ್ಥಿಗಳೂ ನಿಯಮಿತವಾಗಿ ವೆಬ್‌ಸೈಟ್ ನೋಡುತಿರಬೇಕು.

ಡಿಎಂಸಿ (ಎಂಇ-II)
ಮಹಾ ನಿರ್ದೇಶಕರ ಪರವಾಗಿ